ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):-

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹೂಡಿಯಲ್ಲಿರುವ 220:66 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರ ಮತ್ತು ಚಂದಾಪುರದಲ್ಲಿರುವ 66:11 ಕೆವಿ ವಿದ್ಯುತ್ ಉಪಕೇಂದ್ರಗಳು 'ಓವರ್ ಲೋಡ್' ಆಗುತ್ತಿರುವುದರಿಂದ ಅನಿಯಮಿತ ಲೋಡ್ ಷೆಡ್ಡಿಂಗನ್ನು ನಿರ್ವಹಿಸುವುದು ಅನಿವಾರ್ಯವಾಗಿದೆ. ಇಲ್ಲದಿದ್ದಲ್ಲಿ, ಬಹಳ ಬೆಲೆಯ ವಿದ್ಯುತ್ ಪವರ್ ಟ್ರಾನ್ಸ್‌ಫಾರ್ಮರ್ ಮತ್ತು ಇತರೇ ವಿದ್ಯುತ್ ಉಪಕರಣಗಳಿಗೆ ಧಕ್ಕೆ ಉಂಟಾಗುತ್ತದೆ. ಇದರಿಂದ ದೀರ್ಘ ಅವಧಿಯ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗುವ ಸಂಭವವಿರುತ್ತದೆ.

ಇ) ಹೌದು, ಇದಕ್ಕಾಗಿ ಮಂಡಳಿಯು ಪ್ರಸ್ತಾವನೆಯನ್ನು ಸಿದ್ಧಪಡಿಸುತ್ತದೆ.

ಈ) ತುರ್ತು ಕ್ರಮವಾಗಿ, ಈ ಕೈಗಾರಿಕಾ ಪ್ರದೇಶದಲ್ಲಿರುವ ಕೈಗಾರಿಕೆಗಳು ವಾರದಲ್ಲಿ ಬೇರೆ ಬೇರೆ ದಿನಗಳಲ್ಲಿ ರಜಾ ಘೋಷಿಸುವಂತೆ ಮಾಡಲಾಗಿದ್ದು, ಇದರಿಂದ 'ಓವರ್ ಲೋಡ್'ನ್ನು ತಪ್ಪಿಸಲು ಮಾಡಲಾಗುವ ಅನಿಯಮಿತ ಲೋಡ್ ಷೆಡ್ಡಿಂಗನ್ನು ಕಡಿಮೆ ಮಾಡಬಹುದಾಗಿದೆ.

ದೀರ್ಘ ಅವಧಿಯ ಕ್ರಮವಾಗಿ, ಬೆಂಗಳೂರಿನ ಹೊರವಲಯದಲ್ಲಿರುವ ಹೆಚ್.ಎಸ್.ಆರ್. ಬಡಾವಣೆಯಲ್ಲಿ ಮತ್ತು ಯಾವುದನ ಹಳ್ಳಿಯಲ್ಲಿ ಒಂದೊಂದು 220:66 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಇದಕ್ಕಾಗಿ ವಿಶ್ವಬ್ಯಾಂಕ್ ಮತ್ತು ಏಷಿಯನ್ ಅಭಿವೃದ್ಧಿ ಬ್ಯಾಂಕ್‌ಗಳಿಂದ ಆರ್ಥಿಕ ನೆರವನ್ನು ಪಡೆಯಲಾಗುತ್ತಿದೆ.

ಬೋಡಿಹಳ್ಳಿ ಅಣೆ ಹಂತದ ಅಚ್ಚುಕಟ್ಟಿನಿಂದ ಸಂಪಿಗೆ ಹಳ್ಳಕ್ಕೆ ಲೋ ಲೆವಲ್ ಕಾಲುವೆ ನಿರ್ಮಾಣ

1204 (1577): ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ):-

ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ತಾಲ್ಲೂಕು ಕಡಬಾ ಹೋಬಳಿ, ಬೋಡಿಹಳ್ಳಿ ಅಣೆ ಹಂತದ ಅಚ್ಚುಕಟ್ಟಿನಿಂದ ಹರಿಯುವ ಸಂಪಿಗೆ ಹಳ್ಳಕ್ಕೆ ಲೋ ಲೆವಲ್ ಕ್ರಾಸ್‌ವೇ ಅಥವಾ ಸೇತುವೆ ನಿರ್ಮಾಣ ಮಾಡಲು 30 ವರ್ಷದಿಂದ ಸಾರ್ವಜನಿಕರು, ಶಾಸಕರಿಂದ ಒತ್ತಾಯಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಈ ಸೇತುವೆ ನಿರ್ಮಾಣ ಮಾಡದೇ ಇರುವುದರಿಂದ ವಾಹನಗಳ ಮತ್ತು ರೈತರ ಎತ್ತಿನ ಗಾಡಿಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ನಿಜವಲ್ಲವೇ;

ಇ) 1993-94ನೇ ಸಾಲಿನಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):-

ಅ) ಇತ್ತೀಚೆಗೆ ಗಮನಕ್ಕೆ ಬಂದಿದೆ.

ಆ) ಹೌದು.

ಇ) ಹೌದು.